# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1591
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.03.2026

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>2025-26ನೇ ಸಾಲಿನಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳ ವತಿಯಿಂದ ಒಟ್ಟು ಎಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಅನುಮೋದಿಸಲಾಗಿದೆ; ಅವುಗಳಲ್ಲಿ ಇದುವರೆಗೆ ಎಷ್ಟು ಬಸ್ಸುಗಳು ವಿತರಿಸಲ್ಪಟ್ಟು ಸಂಚಾರಕ್ಕೆ ಇಳಿಸಲಾಗಿದೆ; ವಿವರಗಳನ್ನು ಒದಗಿಸುವುದು;</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಈ ಕೆಳಕಂಡಂತೆ ಖಾಸಗಿ ಒಡೆತನದ ವಿದ್ಯುತ್ ಚಾಲಿತ ಬಸ್‌ಗಳನ್ನು Gross Cost Contract (GCC) ಮಾದರಿಯಲ್ಲಿ ಕಾರ್ಯಾಚರಣೆ ಯಲ್ಲಿರುತ್ತವೆ.<br><br>
<table>
<tr><th>ನಿಗಮ</th><th>ಒಟ್ಟು ವಿದ್ಯುತ್ ಚಾಲಿತ ಬಸ್‌ಗಳು</th></tr>
<tr><td>ಕ.ರಾ.ರ.ಸಾ.ನಿಗಮ</td><td>50</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>1714</td></tr>
<tr><td>ಒಟ್ಟು</td><td>1764</td></tr>
</table></td></tr>
<tr><td>ಆ.</td><td>ಖರೀದಿಸಲಾದ ಇ-ಬಸ್ಸುಗಳನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ; ನಿಗಮವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು;</td><td>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಯಾವುದೇ ವಿದ್ಯುತ್ ಚಾಲಿತ ಬಸ್‌ಗಳು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>
ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ 2025-26ನೇ ಸಾಲಿನಲ್ಲಿ ಯಾವುದೇ ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಿರುವುದಿಲ್ಲ.<br><br>
ಕ.ರಾ.ರ.ಸಾ.ನಿಗಮಕ್ಕೆ 2025-26ನೇ ಸಾಲಿನಲ್ಲಿ PM e-sewa ಯೋಜನೆಯಡಿಯಲ್ಲಿ ಒಟ್ಟು 350 ಸಂಖ್ಯೆಯ ವಿದ್ಯುತ್ ಚಾಲಿತ ಬಸ್‌ಗಳು ಮಂಜೂರಾಗಿದ್ದು, 350 ಸಂಖ್ಯೆಯ ವಿದ್ಯುತ್ ಚಾಲಿತ ಬಸ್ಸುಗಳಿಗೆ Detailed Project Report (DPR) ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ವತಿಯಿಂದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>
ಬೆಂ.ಮ.ಸಾ.ಸಂಸ್ಥೆಯು 2025-26ನೇ ಸಾಲಿನಲ್ಲಿ PM E-DRIVE ಯೋಜನೆಯಡಿಯಲ್ಲಿ ಜಿಸಿಸಿ ಆಧಾರದ ಮೇಲೆ ಆಚರಣೆ ಮಾಡಲು 4500 ಸಂಖ್ಯೆಯ ಎಲೆಕ್ಟ್ರಿಕ್ ಬಸ್ಸುಗಳಿಗೆ ಬೇಡಿಕೆ ಸಲ್ಲಿಸಿದ್ದು, ಸದರಿ ಬಸ್ಸುಗಳಿಗೆ ಮೆ|| CESL ರವರು ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>
ವಾಕರಸಾ ಸಂಸ್ಥೆಗೆ PM e BUS SEWA ಯೋಜನೆ ರಡಿಯಲ್ಲಿ ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ತಲಾ 100 ರಂತೆ ಒಟ್ಟು 200 ಎಲೆಕ್ಟ್ರಿಕ್ ಬಸ್ಸುಗಳ ಹಂಚಿಕೆಯಾಗಿರುತ್ತದೆ. ಅದರಂತೆ ಅಳವಡಿಸಿಕೊಳ್ಳುವ ಯೋಜನೆ ಪ್ರಗತಿಯಲ್ಲಿ ಇರುವುದರಿಂದ ಇಲ್ಲಿಯವರೆಗೆ ಯಾವುದೇ ಬಸ್ಸುಗಳು ಕಾರ್ಯಾಚರಣೆಯಲ್ಲಿರುವುದಿಲ್ಲ.<br>
ಕ.ಕ.ರ.ಸಾ ನಿಗಮಕ್ಕೆ 2025-26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ P.M e-BUS Sewa ಯೋಜನೆಯಡಿಯಲ್ಲಿ ಕಲಬುರಗಿ, ಬಳ್ಳಾರಿ ಹಾಗೂ ವಿಜಯಪುರ ನಗರಗಳಿಗೆ ಅನುಕ್ರಮವಾಗಿ 100, 50, ಹಾಗೂ 50 ರಂತೆ ಒಟ್ಟು</td></tr>
</table>

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>200 ವಿದ್ಯುತ್ ಚಾಲಿತ ಬಸ್ಸುಗಳು ಮಂಜೂರಾಗಿರುತ್ತವೆ. ಈ ಪೈಕಿ ಯಾವುದೇ ಬಸ್ಸುಗಳು ವಿತರಣೆಯಾಗಿರುವುದಿಲ್ಲ. Convergence Energy Service Limited (CESL) ರವರಿಂದ ಕ್ರೋಢಿಕೃತ ಪ್ರಮಾಣಕ್ಕೆ ಟೆಂಡರ್ ಕರೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>2025-26ನೇ ಸಾಲಿನಲ್ಲಿ ಅನುಮೋದಿಸಲಾದ ಎಲೆಕ್ಟ್ರಿಕ್ ಬಸ್ಸುಗಳು ಟೆಂಡರ್ ಹಂತದಲ್ಲಿದ್ದು, ಇನ್ನೂ ಯಾವುದೇ ಬಸ್ಸುಗಳು ನಿಯೋಜನೆಯಾಗಿರುವುದಿಲ್ಲ.</td></tr>
<tr><td>ಇ.</td><td>ಕಲ್ಯಾಣ ಕರ್ನಾಟಕದ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಿಗೆ ವಿಶೇಷವಾಗಿ ಎಷ್ಟು ಇ-ಬಸ್ಸುಗಳನ್ನು ಮೀಸಲಿಟ್ಟಿದ್ದಾರೆ? (ಜಿಲ್ಲಾವಾರು ವಿವರ ಒದಗಿಸುವುದು)</td><td>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕಲ್ಯಾಣ ಕರ್ನಾಟಕದ ನಗರ ಪ್ರದೇಶಗಳಿಗೆ ವಿಶೇಷವಾಗಿ 200 ಇ-ಬಸ್ಸುಗಳನ್ನು ಮೀಸಲಿಟ್ಟಿದ್ದು ಜಿಲ್ಲಾವಾರು ವಿವರ ಈ ಕೆಳಕಂಡಂತಿವೆ.
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಮೀಸಲಿಟ್ಟ ಇ-ಬಸ್ಸುಗಳು</th></tr>
<tr><td>01</td><td>ಕಲಬುರಗಿ</td><td>100</td></tr>
<tr><td>02</td><td>ಬಳ್ಳಾರಿ</td><td>50</td></tr>
<tr><td>03</td><td>ವಿಜಯಪುರ</td><td>50</td></tr>
</table>
</td></tr>
</table>

ಸಂಖ್ಯೆ: ಟಿಡಿ 101 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು